**MVC-852/2025** **ಪಿ.ಡಬ್ಲ್ಯೂ-1 (ಶಶಿಧರ)**

ದಿನಾಂಕಃ **05.06.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಡಿ.ಜಿ.ಎನ್. ವಕೀಲರಿಂದಃ</u>**

ಕೆಎ 11 ಇಎ 1713 ಬೈಕ್ ನನ್ನ ಮಾಲೀಕತ್ವಕ್ಕೆ ಒಳಪಟ್ಟಿರುತ್ತದೆ ಎಂದು ತೋರಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅಪಘಾತಕ್ಕೆ ಸಂಬಂಧಿಸಿದಂತೆ ಒಂದು ದಿನದ ನಂತರ ನಾನೇ ದೂರು ನೀಡಿರುತ್ತೇನೆ. ನನ್ನ ತಂದೆ ಸ್ವತಃ ಬಿದ್ದು ಗಾಯಗೊಂಡ ವಿಚಾರ ಗೊತ್ತಿದರೂ ಸಹ ಒಂದು ದಿನದ ನಂತರ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದುರಸ್ಥಿಗೆ ಸಂಬಂಧಿಸಿದಂತೆ ನಿಪಿ6 ಟ್ಯಾಕ್ಸ್ ಇನ್ವಾಯ್ಸ್ ಅನ್ನು ಹಾಜರುಪಡಿಸಿರುತ್ತೇನೆ. ನಿಪಿ6 ರ 3 ನೇ ಪುಟದಲ್ಲಿ ಟೋಟಲ್ ಇನ್ವಾಯ್ಸ್ ಅಮೌಂಟ್ ರೂ.14,140.30 ಪೈಸೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಮೊತ್ತ ಪಾವತಿಯಾಗಿದೆ ಎಂದು ನಿಪಿ6 ರಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ. ವಾಹನಕ್ಕೆ ಯಾವುದೇ ಜಖಂ ಆಗಿರುವುದಿಲ್ಲ, ಆದರೂ ಸಹ ನಿಪಿ6 ಅನ್ನು ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಜಖಂ ಆದ ಹಿನ್ನೆಲೆಯಲ್ಲಿ ಬೇರೆಯವರ ವಾಹನವನ್ನು ಬಾಡಿಗೆಗೆ ಪಡೆದುಕೊಂಡು ಸುಮಾರು ರೂ.15000/- ಖರ್ಚಾಗಿದೆ, ಜಖಂ ಆದ ಬೈಕನ್ನು ಷೋರೂಂ ಗೆ ತೆಗೆದುಕೊಂಡು ಹೋಗಲು ಆಟೋ ಬಾಡಿಗೆ ಖರ್ಚಾಗಿದೆ ಎಂದು ತೋರಿಸುವ ದಾಖಲೆ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಪಘಾತ ನನ್ನ ತಂದೆಯ ತಪ್ಪಿನಿಂದ ಆದ ವಿಚಾರ ಗೊತ್ತಿದ್ದರೂ ಸಹ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ ಪೂರಕ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**MVC-852/2025** **ಪಿ.ಡಬ್ಲ್ಯೂ-1 (ಶಶಿಧರ)**

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**